ತ್ತಾರೆ. ಇದರಲ್ಲಿ ಸತ್ಯಾಂಶ ಇಲ್ಲವೆಂದು ನಮಗೆ ಅನ್ನಿಸುತ್ತದೆ. ಯಾವ ತಾರೀಖಿನಿಂದ ಇದನ್ನು ಐಡೆಂಟಿಫೈ ಮಾಡಿದ್ದೀರಿ ? ಹೆಚ್ಚುವರಿ ಭೂಮಿ ಇದೆಯೆಂದು ಕಂಡು ಹಿಡಿಯುವುದಕ್ಕೆ ಏನಾದರೂ ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಾ ? ಸರ್ಕಾರ ಸಮಿತಿ ರಚನೆ ಮಾಡುವುದಾಗಲೀ, ತಾಲ್ಲೂಕು ಮಟ್ಟದಲ್ಲಿ ಯಾವುದಾದರೂ ರೀತಿಯಿಂದ ಈ ಭೂಮಿಯನ್ನು ಐಡೆಂಟಿಫೈ ಮಾಡುವುದಕ್ಕೆ ಸರ್ಕಾರದ ಬಳಿ ಯೋಜನೆ ಏನಾದರೂ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿಯ ಅವಶ್ಯಕತೆ ಇಲ್ಲ. ಸರ್‌ಪ್ಲಸ್ ಲ್ಯಾಂಡ್—ಲ್ಯಾಂಡ್ ರಿಫಾರ್ಮ್ಸ್ ಮಾಡತಕ್ಕಂಥಾದ್ದು. ಲಾಂಡ್‌ಟ್ರಿಬ್ಯೂನಲ್ ಕೆಲಸ. ಈಗ ಬಗರ್‌ಹುಕ್ಕುಂ ಮಾಡಿದ್ದನ್ನು ರಗ್ಯುಲರೈಸ್ ಮಾಡುವುದಕ್ಕೆ ಕಾನೂನು ಇದೆ. ಸರ್‌ಪ್ಲಸ್ ಲ್ಯಾಂಡ್ ಇರುವುದು ಲ್ಯಾಂಡ್ ರಿಫಾರ್ಮ್ಸ್‌ಕೆಳಗೆ ಲ್ಯಾಂಡ್ ರಿಫಾರ್ಮ್ಸ್‌ಕೆಳಗೆ ಸರ್‌ಪ್ಲಸ್ ಲ್ಯಾಂಡನ್ನು ಡಿಕ್ಲೇರ್ ಮಾಡಿದ್ದನ್ನು ಅವರು ಕೇಳಿದ್ದಾರೆ. ಅದನ್ನು ನಾನು ಹೇಳಿದ್ದೇನೆ.

SRI U. BHUPATHI.—It is only surplus land according to the Government.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್‌ಪ್ಲಸ್ ಲ್ಯಾಂಡ್ ಅಂದರೆ ಲ್ಯಾಂಡ್. ರಿಫಾರ್ಮ್ಸ್‌ಕೆಳಗೆ ಟ್ರಿಬ್ಯೂನಲ್‌ನವರು ಏನು ಡಿಕ್ಲೇರ್ ಮಾಡುತ್ತಾರೆ ಅದು ಸರ್‌ಪ್ಲಸ್ ಲ್ಯಾಂಡ್. ಲ್ಯಾಂಡ್ ಟ್ರಿಬ್ಯೂನಲ್ ಪ್ರಕಾರ land available for the grant ಎನ್ನುವುದು ಬೇರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ

೨೭೧೪. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳೆಷ್ಟು ? ಈ ನಿಲಯಗಳಲ್ಲಿ ಪ್ರಯೋಜನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು. ಪರಿಶಿಷ್ಟ ಜಾತಿ ಹಾಗೂ ಇತರರು (ಶೇಕಡ ತರಗತಿಯಿಂದ ೧೦ನೇ ತರಗತಿಯವರೆಗೆ)

ಆ) ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕೆ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನದಲ್ಲಿ ಇದೆಯೇ, ಹೊಸದಾಗಿ ಪ್ರಾರಂಭಿಸಲಾಗಿರುವ ವಿದ್ಯಾರ್ಥಿನಿಲಯಗಳೆಷ್ಟು ?

ಇ) ನಿಲಯಗಳಲ್ಲಿ ಹಿಂದಿನ ನಿಗದಿತ ಸಂಖ್ಯೆಯನ್ನು ಬೇಡಿಕೆಗೆ ಅನುಕೂಲವಾಗಿ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ, ಹಾಗಿಲ್ಲದಿದ್ದಲ್ಲಿ, ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ತಲಾ ವಿದ್ಯಾರ್ಥಿಗೆ ನೀಡುತ್ತಿರುವ ಹಣವನ್ನು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ ?

ಈ) ಪಿ.ಯು.ಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಲ್ಲವಿರುವುದು ಸರ್ಕಾರದ ಗಮನದಲ್ಲಿದೆಯೇ, ಇಲ್ಲವಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧) ನಿಲಯಗಳ ಸಂಖ್ಯೆ ೧೦೫೩

೨) ವಿದ್ಯಾರ್ಥಿಗಳ ಸಂಖ್ಯೆ ೬೩,೪೦೧. ಇವರಲ್ಲಿ ೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ೫೧,೩೬೪

೩) ಹೌದು. ೧೯೮೭–೮೮ನೇ ಸಾಲಿನಲ್ಲಿ ೫೫ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ.

ಇ) ಪ್ರಥಮಾದ್ಯತೆ ಇತರ ಸೌಕರ್ಯಗಳನ್ನು ಆಯಾಯಾ ಮಂಜೂರಾತಿ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ೧೯೮೭–೮೮ನೇ ಸಾಲಿನಲ್ಲಿ ೨೫೫೪ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಭೋಜನ ವೆಚ್ಚ ರೂ. ೧೨೦–೦೦ ಗಳಿಂದ ೧೫೦.೦೦ ಗಳಿಗೆ ಹೆಚ್ಚಿಸುವ ವಿಷಯ ಪರಿಶೀಲನೆಯಲ್ಲಿದೆ.

ಈ) ಬೆಂಗಳೂರು ನಗರದಲ್ಲಿ ಮಾತ್ರ ಪಿ.ಯು.ಸಿ. ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕವಾಗಿ ನಿಲಯಗಳಿದ್ದು ಇತರ ಜಿಲ್ಲೆಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಸಾರ್ವಜನಿಕ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾವಕಾಶ ನೀಡಲಾಗುತ್ತಿದೆ.

೧೦-೦೦ ಎ.ಎಂ.

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ನಿಲಯಗಳೇ ವರ ಪ್ರದಾನ. ಈ ವರ್ಗದ ಜನ ಯಾವುದೇ ಸೌಲಭ್ಯ ಕೊಟ್ಟರೂ ಕೂಡ, ಈ ವಿದ್ಯಾರ್ಥಿನಿಲಯಗಳು ಮಾತ್ರ ಪ್ರಮುಖವಾದವು. ೧೯೮೬-೮೮ನೇ ಇಸವಿಯಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. ಅದೇರೀತಿ ೧೯೮೮-೮೯ನೇ ಸಾಲಿನಲ್ಲಿಯೂ ಕೂಡ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸತಕ್ಕ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತಿದ್ದೇನೆ. ಸ್ವಾತಂತ್ರ್ಯ ಬಂದು ೩೦-೪೦ ವರ್ಷಗಳ ನಂತರವೂ, ಮೊದಲು ಏನು ವಿದ್ಯಾರ್ಥಿನಿಲಯಂಗಳನ್ನು ಪ್ರಾರಂಭ ಮಾಡಿದರೋ ಅಷ್ಟೇ ವಿದ್ಯಾರ್ಥಿನಿಲಯಗಳು ಈಗಲೂ ಇವೆಯೇ ಹೊರತು, ಇದುವರೆಗೂ ಅವುಗಳನ್ನು ಹೆಚ್ಚು ಮಾಡಿಲ್ಲವೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಹೆಚ್ಚು ಮಾಡತಕ್ಕ ಉದ್ದೇಶ ಸರ್ಕಾರಕ್ಕೆ ಇದ್ದರೆ, ಕೂಡಲೇ ಈ ವಿದ್ಯಾರ್ಥಿನಿಲಯಗಳನ್ನು ಹೆಚ್ಚುಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಕೇವಲ ಸ್ಥಳಾವಕಾಶ ಇದೆಯೋ, ಇಲ್ಲವೋ ನೋಡಿಕೊಂಡು ಮಾಡುವುದಲ್ಲ, ಹೆಚ್ಚಿನ ಸಂಖ್ಯೆಯಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಬಯಸುತ್ತೇನೆ. ಇನ್ನು ೧೯೮೬-೮೮ನೇ ಸಾಲಿನಲ್ಲಿ ೨೫೪ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಹಾಗೂ ಒಟ್ಟು ೬೩,೪೦೧ ವಿದ್ಯಾರ್ಥಿಗಳು ಇದ್ದಾರೆಂದು ಹೇಳಿದ್ದಾರೆ. ಆದರೆ ಇವೊತ್ತು ಆದರ ಎರಡು ಪಟ್ಟು ವಿದ್ಯಾರ್ಥಿಗಳಿಂದ ಬೇಡಿಕೆ ಇದೆ. ಆದ್ದರಿಂದ ಮಾನ್ಯ ಸಚಿವರು ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟರೆ, ಮುಂದಿನ ಪ್ರಶ್ನೆಯನ್ನು ನಂತರ ಕೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಇರತಕ್ಕ ಕಳಕಳಿ ಸರ್ಕಾರಕ್ಕೂ ಇದೆ. ಈಗ ರಾಜ್ಯದಲ್ಲಿ ೧೦ ಲಕ್ಷದ ೨೪ ಸಾವಿರ ಪರಿಶಿಷ್ಟಜಾತಿ ಮತ್ತು ೨ ಲಕ್ಷದ ೨೨ ಸಾವಿರ ಪರಿಶಿಷ್ಟವರ್ಗದ ವಿದ್ಯಾರ್ಥಿಗಳು, ಎಂದರೆ ಒಟ್ಟು ೧೨ ಲಕ್ಷದ ೪೬ ಸಾವಿರ ವಿದ್ಯಾರ್ಥಿಗಳು ಪ್ರಾಥಮಿಕ ಮಂತ್ತು ಪ್ರೌಢಶಾಲೆಗಳಲ್ಲಿ ಓದುತ್ತಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಲಯಗಳನ್ನು ಒದಗಿಸುವುದಕ್ಕೆ ಆಗಿಲ್ಲ. ಈ ಬಗ್ಗೆ ಸರ್ಕಾರ ಗಮನಹರಿಸಿ, ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಹೆಚ್ಚು ಮಾಡಬೇಕು, ಹಾಗೂ ಇವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂಬ ಬಗ್ಗೆ ಕ್ರಮ ತೆಗೆದುಕೊಂಡಿದೆ. ೧೯೮೬-೮೮ನೇ ಸಾಲಿನಲ್ಲಿ ಕೇವಲ ೨೫೪ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾತ್ರ ಹೆಚ್ಚು ಮಾಡಿದ್ದೇವೆ, ಇದು ಕಡಿಮೆ, ಇದನ್ನು ನಾನೂ ಒಪ್ಪುತ್ತೇನೆ. ಈಗ ಪರಿಶಿಷ್ಟಜಾತಿ ಮತ್ತು ವರ್ಗದವರಿಗೆ ೧೨೦, ಹಿಂದುಳಿದ ವರ್ಗದವರಿಗೆ ೧೨೦ ಮತ್ತು ವಸತಿ ಮತ್ತು ಆಶ್ರಮ ಶಾಲೆಗಳವರಿಗೆ ಹೀಗೆ ಒಟ್ಟು ೨೫೦ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಕೊಟ್ಟಿದೆ. ಹಾಗೆಯೇ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೂ ಸಹ ಆದೇಶ ಕೊಡಲಾಗಿದೆ.

ಶ್ರೀ ಎಂ. ಶಿವಣ್ಣ —ನಾನು ಒಂದು ಸೂಚನೆಯನ್ನು ಮಾನ್ಯಸಚಿವರಿಗೆ ಕೊಡುತ್ತೇನೆ. ಇವತ್ತು ಖಾಸಗೀ ವಿದ್ಯಾರ್ಥಿ ನಿಲಯಗಳಾಗಲೀ, ಸರ್ಕಾರಿ ವಿದ್ಯಾರ್ಥಿ ನಿಲಯಗಳಾಗಲೀ, ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳಾಗಲೀ ಇರತಕ್ಕ ವಿದ್ಯಾರ್ಥಿಗಳ ಪರಿಸ್ಥಿತಿ ಭಾರಿ ಶೋಚನೀಯವಾಗಿದೆ. ಆದ್ದರಿಂದ ಜಿಲ್ಲಾಮಟ್ಟದಲ್ಲಿ ಅಥವಾ ರಾಜ್ಯಮಟ್ಟದಲ್ಲಿ, ಅಧಿಕಾರಿಗಳ ಒಂದು ಟೀಮನ್ನು ಕಳುಹಿಸಿಕೊಟ್ಟು, ಅಲ್ಲಿನ ವಿದ್ಯಾರ್ಥಿಗಳ ಪರಿಸ್ಥಿತಿ ಏನೆಂದು ತಿಳಿದು ಅವರಿಂದ ವರದಿ ತರಿಸಿಕೊಂಡು ನೋಡಿದರೆ, ಇನ್ನೂ ಸುಮಾರು ೫೦ ಭಾಗ ಸುಧಾರಣೆ ಮಾಡಬೇಕಾಗಿದೆ. ಈಗ ಅವರಿಗೆ ೧೦೦ ರೂಪಾಯಿಗಳನ್ನು ಕೊಡಬಹುದು, ಹಿಂದೆ ೬೦ ರೂಪಾಯಿಗಳನ್ನು ಕೊಡುತ್ತಿದ್ದರು, ಇದು ಅನಂತರ ೪೦ ರೂಪಾಯಿಗಳಿಗೆ ಹೆಚ್ಚಾಗಿ, ಈಗ ೧೦೦ ರೂಪಾಯಿ ಕೊಡುತ್ತಿದ್ದೀರಿ. ಆದರೆ, ಇವತ್ತು ನೀವು ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೂ ಸಂಬಳ ಜಾಸ್ತಿ

ಮಾಡಿದ್ದೀರಿ, ಮಾಡಿ ನಮಗೆ ಆಭ್ಯಂತರ ಇಲ್ಲ. ಆದರೆ, ಈ ವಿದ್ಯಾರ್ಥಿನಿಲಯಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಕೊಡತಕ್ಕ ನೂರು ರೂಪಾಯಿಗಳು ಏನೇನೂ ಸಾಲದು. ಊಟಕ್ಕೆ, ತಿಂಡಿಗೆ, ಮತ್ತಿತರ ಸೌಲಭ್ಯ ಕೊಡಬೇಕಾದರೆ ಈ ಹಣ ಸಾಲದಾಗಿದೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಪ್ರಯೋಜನವಿಲ್ಲ. ೧೦ ವರ್ಷಗಳಿಂದಲೂ ಇದು ಪರಿಶೀಲನೆಯಲ್ಲೇ ಇದೆ. ಆದ್ದರಿಂದ ಪರಿಶೀಲನೆಯಲ್ಲಿದೆ ಎಂಬ ಮಾತು ಉಪಯುಕ್ತವಾದುದಲ್ಲ. ಈ ವರ್ಷವಾದರೂ ಸರ್ಕಾರ ವಿದ್ಯಾರ್ಥಿ ನಿಲಯಗಳನ್ನು ಹೆಚ್ಚು ಮಾಡುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ನಿಖರವಾಗಿ ಹೇಳಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ವಿದ್ಯಾರ್ಥಿನಿಲಯಗಳ ಸಂಧಾರಣೆ ಬಗ್ಗೆ ಈಗಾಗಲೇ ಅನೇಕಸಾರಿ ಸಭೆಯನ್ನು ಕರೆದು, ಯಾರು ಯಾರು ವಿದ್ಯಾರ್ಥಿ ನಿಲಯಗಳನ್ನು ತನಿಸಿ ಮಾಡಬೇಕೆಂಬುದರ ಬಗ್ಗೆ ತಿಳುವಳಿಕೆ ಕೊಡಲಾಗಿದೆ, ಈ ವಿದ್ಯಾರ್ಥಿನಿಲಯಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸರಕಾರ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದೆ. ಅವರಿಗೂ ಸಹ ನಾವು ಚೆನ್ನಾಗಿ ಓದಬೇಕು, ಪ್ರಥಮದರ್ಜೆಯಲ್ಲಿ ಪಾಸಾಗಬೇಕೆಂ ಎನ್ನುವುದರ ಬಗ್ಗೆ ಕಳಕಳಿ ಇರಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಇರತಕ್ಕಂಥ ಲೋಪದೋಷಗಳನ್ನು ನಾವು ಮನಗಂಡಿದ್ದೇವೆ. ಊಟ ಕೊಡುವುದರಲ್ಲಿ, ಅಕ್ಕಿ ಸರಬರಾಜು ಮಾಡುವುದರಲ್ಲಿ, ತರಕಾರಿ ಕೊಡುವುದರಲ್ಲಿ ಇರತಕ್ಕ ಲೋಪದೋಷಗಳು ಬೆಳಕಿಗೆ ಬಂದು ಅದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇವೆ. ಸರಕಾರ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಕೊಟ್ಟಾಗ Percentage of result should not be less than 80%. ಆದರೆ ನಾವು ರಿಪ್ಯೂ ಮಾಡಿದಾಗ ಅದು ೩೦-೩೫ ಪರ್ಸೆಂಟ್ ಇದೆ. ಈ ಹಾಸ್ಟೆಲ್‌ಗಳಿಗೆ ಒಬ್ಬ ಟೀಚರನ್ನು ಹಂಗಾಮಿಯಾಗಿ ಹಾಕುವ ವ್ಯವಸ್ಥೆ ಮಾಡುತ್ತೇವೆ. ಹಾಗೂ ಹಾಸ್ಟೆಲ್‌ನಲ್ಲಿರತಕ್ಕ ಸೂಪ್ರೆಂಟೆಂಡೆಂಟ್ ಮತ್ತು ವಾರ್ಡನ್ ಇವರ ವೇತನ ಜವಾಬ್ದಾರಿಯನ್ನು ಫಿಕ್ಸ್ ಮಾಡಿರುತ್ತೇವೆ. ಈ ರೀತಿಯಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸಂಧಾರಣೆ ಮಾಡುವುದಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ದುಬಾರಿಯ ಕಾಲದಲ್ಲಿ ೧೦೦ ರೂಪಾಯಿಗಳನ್ನು ಕೊಡುತ್ತಿರುವುದು ಕಡಿಮೆ ಎಂಬುದು ನಮ್ಮ ಗಮನಕ್ಕೂ ಬಂದಿದೆ, ಇದನ್ನು ೧೫೦ ರೂಪಾಯಿ ಮಾಡುವುದಕ್ಕೆ ಪ್ರಪೋಸಲ್ ಆಗಿದೆ. ಪ್ಲಾನಿಂಗ್ ಸೆಕ್ರೆಟರಿಯವರು ಇದನ್ನು ಕ್ಲಿಯರ್ ಮಾಡಿದ್ದಾರೆ, ಈಗ ಇದು ಫೈನಾನ್ಸ್ ಸೆಕ್ರೆಟರಿಯವರ ಮುಂದೆ ಇದೆ. ಆದಷ್ಟು ಬೇಗ ಇದನ್ನು ಕ್ಲಿಯರ್ ಮಾಡಿಸಿ ಹೆಚ್ಚು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈಗ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಹಣವನ್ನು ೧೦೦ ರಿಂದ ೧೫೦ ರೂಪಾಯಿಗಳಿಗೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಪ್ರಶ್ನೆಯನ್ನು ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ವಿದ್ಯಾರ್ಥಿಗಳಿಗೆ ದಿನ ಒಂದಕ್ಕೆ ಒಂದೂವರೆ ರೂಪಾಯಿಗಳಂತೆ ಊಟದ ವೆಚ್ಚ ಕೊಡುತ್ತಿದ್ದಾರೆ. ಒಂದೂವರೆ ರೂಪಾಯಿಗಳಿಗೆ ಇವತ್ತಿನ ದಿವಸ ಒಂದು ಇಡ್ಲಿ ಕೂಡಾ ಸಿಗುವುದಿಲ್ಲ. ವಿದ್ಯಾರ್ಥಿಗಳು ಹೆಚ್ಚಿನ ಪರ್ಸೆಂಟೇಜ್‌ನಲ್ಲಿ ಪಾಸಾಗಬೇಕೆಂ. ೮೦ ಪರ್ಸೆಂಟ್ ಬರಬೇಕೆಂದು ತಾವು ಹೇಳುವುದು ಸರಿಯಲ್ಲ. ೧೫೦ ರೂಪಾಯಿ ಮಾಡುತ್ತೇವೆ ಎಂದು ಏನು ಹೇಳುತ್ತಿದ್ದೀರಿ ಅದೂ ಯೋಗ್ಯವಲ್ಲ. ಇಂತಹ ದುಬಾರಿ ದಿನಗಳಲ್ಲಿ ಕಡೇಪಕ್ಷ ಅವರಿಗೆ ತಿಂಗಳಿಗೆ ೩೦೦ ರೂಪಾಯಿಗಳನ್ನಾದರೂ ಮಾಡಬೇಕು. ಏನೇ ತೊಂದರೆಯಾದರೂ ಕೂಡಾ ಅವರಿಗೆ ದಿನ ಒಂದಕ್ಕೆ ೫ ರೂಪಾಯಿ ಊಟದ ವೆಚ್ಚ ಕೊಡತಕ್ಕಂಥ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಈಗ ಇದನ್ನು ೧೦೦ ರಿಂದ ೧೫೦ ರೂಪಾಯಿ ಮಾಡುವುದಕ್ಕೆ ತೀಪ್ರವಾದ ಗಮನಹರಿಸಿ ಆದಷ್ಟು ಬೇಗ ಮಾಡಿಸುತ್ತೇನೆ.

ಶ್ರೀ ಎಂ. ಶಿವಣ್ಣ.—ಅಧ್ಯಕ್ಷರೇ, ಕನಿಷ್ಟಪಕ್ಷ ೨೦೦ ರೂಪಾಯಿಗಳನ್ನಾದರೂ ಕೊಡಬೇಕು. ಈಗ ೧೫೦ ರೂಪಾಯಿಗಳಿಗೆ ಹೆಚ್ಚಿಸುವುದನ್ನು ಮಾತ್ರ ಈ ವರ್ಷದಿಂದಲೇ ಪ್ರಾರಂಭ ಮಾಡದೇ ಹೋದರೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೊದಲೇ ಪೌಷ್ಟಿಕಾಂಶದ ಕೊರತೆ ಇರುತ್ತದೆ. ಆದುದರಿಂದ ಇದನ್ನು ಕೊಡುವುದರಲ್ಲಿ ತಡ ಮಾಡಿ ಅವರಿಗೆ ಕಡಿಮೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಈ ವರ್ಷದಿಂದಲೇ ಇದನ್ನು ಮಾಡಲೇ

ಬೇಕೆಂದು ಕೇಳಬಯಸುತ್ತೇನೆ. ಇನ್ನು ರೆಸಿಡೆನ್‌ಷಿಯಲ್ ಸ್ಕೂಲ್‌ಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡಿದ್ದೀರಿ ಎಷ್ಟು ಪ್ರಾರಂಭ ಮಾಡಿದ್ದೀರಿ, ಅಲ್ಲಿ ಏನೇನು ವ್ಯವಸ್ಥೆ ಮಾಡಿದ್ದೀರಿ, ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ತಾವು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ —ರೆಸಿಡೆನ್‌ಷಿಯಲ್ ಸ್ಕೂಲ್ಸ್ ಎಂದರೆ ವಸತಿಶಾಲೆಗಳು ಅಥವಾ ಆಶ್ರಮ ಶಾಲೆಗಳನ್ನು ಪ್ರತಿ ತಾಲ್ಲೂಕಿಗೂ ಮಾಡುವ ಕಾರ್ಯಕ್ರಮ ಇದೆ. ಈಗ ೫೦ ರೆಸಿಡೆನ್‌ಷಿಯಲ್ ಸ್ಕೂಲ್ ಮಾಡಬೇಕೆಂದು ೧೯೮೮-೮೯ರಲ್ಲಿ ಏನು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. It will cover all the taluks.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೦೦ (೧೯೦೭) ಮುಂದೂಡಲಾಯಿತು

ಅಧ್ಯಕ್ಷರು.—ಮಾನ್ಯ ವಸಂತ ಬಂಗೇರ ಅವರೇ, ತಮ್ಮ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ. ಅವರಿಂದ ಉತ್ತರ ತರಿಸಿ ಕೊಡಲಾಗುವುದು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ನಿಗಮದಿಂದ ಬೀಜಧನ ಯೋಜನೆಯಲ್ಲಿ ಹಿಂದುಳಿದ ಜನಾಂದವವರಿಗೆ ನೀಡಿದ ಸಾಲ.

೧೯೮೪ ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭-೮೮ನೇ ಸಾಲಿನಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ನಿಗಮದಿಂದ ಬೀಜಧನ ಯೋಜನೆಯಲ್ಲಿ ಹಿಂದುಳಿದ ಜನಾಂಗದವರಿಗೆ ನೀಡಿದ ಸಾಲ ಸೌಲಭ್ಯವೆಷ್ಟು ;

ಆ) ಈ ರೀತಿ ಸೌಲಭ್ಯ ಹೊಂದಿದ ಫಲಾನುಭವಿಗಳ ಸಂಖ್ಯೆ ಎಷ್ಟು, ಇವರಿಗೆ ನೀಡಿರುವ ಸಬ್‌ಸಿಡಿ ಹಣವೆಷ್ಟು ;

ಇ) ಈ ಯೋಜನೆಯಲ್ಲಿ ಹರಿಜನರು ಮತ್ತು ಲಂಬಾಣಿಯವರಿಗೆ ದೊರೆತಿರುವ ಸಬ್‌ಸಿಡಿ ಹಣವು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ;

ಈ) ಈ ಯೋಜನೆಯ ೮೭-೮೮ನೇ ಸಾಲಿನಲ್ಲಿ ಟಾರ್ಗೆಟ್ ತಲುಪಿರುವ ಮತ್ತು ಅ್ಯಾಚ್ಸ್ ಆಗಿರುವ ಜಿಲ್ಲೆಗಳಾವುವು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇತರ ಹಿಂದುಳಿದ ವರ್ಗಗಳ ಜನರಿಗೆ ಯಾವುದೇ ಸೌಲಭ್ಯವನ್ನು ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ೨೦,೩೧ ಲಕ್ಷ ರೂಪಾಯಿಗಳು.